

ಹುಚ್ಚು ನಿರ್ಧಾರ ಯಾಕ ಮಾಡಿದಿಯಪಾ? ಇನ್ನೂ ಬೆಳೀಬೇಕಾದವನು, ಮಾಡಬೇಕಾದವನು, ಮಟ್ಟಬೇಕಾದವನು. ನಿನ್ನ ಬುದ್ಧೀ ಎಲ್ಲಿಟ್ಟೀದಿ?' ಅಂತ ಬೈದು ಬುದ್ಧೀ ಹೇಳಿದರು. 'ಒಂದು ದಾರಿ ಮುಚ್ಚಿದ್ರ ಹಲವು ದಾರಿ ತಗದಿರ್ತಾವು. ಕೆಲಸ ಮಾಡಾಕ ತಯಾರು ಅದೀಯೇನು ನಮ್ಮ ಗ್ಯಾರೇಜಿನಾಗ?'

'ಹೂನ್ರೀ.'

ಅವರನ್ನ ಹಿಂಬಾಲಿಸಿದೆ. ಅವರು ಮುಂಜಾನಿಯ ವಾಕಿಂಗಂತ ರೈಲು ಹಳಿಗುಂಟ ಇರೋ ಕಾಲ್ದಾರಿಯಲ್ಲಿ ನಡೀತಾ ಇರುವಾಗ ಹಳಿಯ ನಡುವೆ ಕೂತಿದ್ದ ನನ್ನ ಹಿಡಿದೆಳೆದು ಜೀವದಾನ ಮಾಡಿದರು ಈ ಗ್ಯಾರೇಜಿನ ಮಾಲೀಕ ರಾಮದಾಸ. ನಾನು ಹುಚ್ಚು ಮನಸಿನ ಕೈಯಾಗ ಬುದ್ಧೀ ಕೊಟ್ಟುಬಿಟ್ಟಿದ್ದೆ. ನಿಷ್ಠೆಯಿಂದ ಕೆಲಸಾ ಮಾಡತಾ ಬಂದಿದ್ದರ ಪ್ರತಿಫಲ ಈ ಗ್ಯಾರೇಜು. ಅವರೇ